*ಆ) ವಸತಿ ಸೌಕರ್ಯವಿಲ್ಲದವರಿಗೆ ಈ ಸೌಲಭ್ಯ ಒದಗಿಸಲು ಸರ್ಕಾರದವರು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ವಸತಿ ಸೌಕರ್ಯ ಇರುವವರು 87.

ವಸತಿ ಸೌಕರ್ಯ ಇಲ್ಲದಿರುವವರು 88.

ಆ) ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಹಂತ ಹಂತವಾಗಿ ವಸತಿ ಸೌಕರ್ಯ ಒದಗಿಸಲು ಪ್ರಯತ್ನಿಸಲಾಗುವುದು.

**ಹೌಸಿಂಗ್ ಬೋರ್ಡ್ ಸಾಲದ ಬಡ್ಡಿ ದರ**

1252 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹೌಸಿಂಗ್ ಬೋರ್ಡ್‌ನವರು ಮಂಜೂರು ಮಾಡುವ ಮನೆಗಳಿಗೆ ತಗಲುವ ಒಟ್ಟು ಹಣದ ಮೇಲೆ ಶೇಕಡ ಎಷ್ಟು ಬಡ್ಡಿಯನ್ನು ವಿಧಿಸಲಾಗುವುದು?*

*ಆ) ಸಕಾಲದಲ್ಲಿ ಕಂತಿನ ಪಾವತಿ ಮಾಡದವರ ಮೇಲೆ ಹಾಗೂ ಹಣ ಕಟ್ಟದ ಡಿಫಾಲ್ಟರ್‌ಗಳ ಮೇಲೆ ಶೇಕಡ ಎಷ್ಟು ಚಕ್ರ ಬಡ್ಡಿ ವಿಧಿಸಲಾಗುವುದು*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ರೂ. 15,000ವರೆಗೆ ಶೇ 7.5

ರೂ. 15,000ರಿಂದ 20,000ವರೆಗೆ ಶೇ.9

ರೂ. 20,000 ರಿಂದ 30,000ವರೆಗೆ ಶೇ.9.5

ರೂ. 30,000 ರಿಂದ 60,000 ವರೆಗೆ ಶೇ.11.5

ರೂ. 60,000 ರಿಂದ 1,00,000 ವರೆಗೆ ಶೇ.13

ರೂ. 1,00,000 ರಿಂದ 2,50,000 ವರೆಗೆ ಶೇ.14

ರೂ. 2,50,000 ರಿಂದ ಮೇಲ್ಪಟ್ಟು ಶೇ.16

ಆ) ಸಕಾಲದಲ್ಲಿ ಕಂತಿನ ಪಾವತಿ ಮಾಡದವರ ಮೇಲೆ ಹಾಗೂ ಹಣ ಕಟ್ಟದ ಡಿಫಾಲ್ಟರ್‌ಗಳ ಮೇಲೆ ಶೇ 3 ರಷ್ಟು ಚಕ್ರ ಬಡ್ಡಿ ವಿಧಿಸಲಾಗುವುದು.

**ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ದರಖಾಸ್ತು ಜಮೀನು**

1251 - ಶ್ರೀ ಎನ್.ಜಿ. ನಾಯಕ್, (ಮೊಳಕಾಲ್ಮೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ ದರಖಾಸ್ತು ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು?*

*ಆ) ಅವರಲ್ಲಿ ಹರಿಜನ-ಗಿರಿಜನರ ಸಂಖ್ಯೆ ಎಷ್ಟು?*

*ಇ) ಸರ್ಕಾರದವರು ಸದರಿ ಹರಿಜನ-ಗಿರಿಜನರಿಗೆ ಜಮೀನನ್ನು ಮಂಜೂರು ಮಾಡುವರೇ?*

*ಈ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ - 91 ಜನರು, ಚಳ್ಳಕೆರೆ ತಾಲ್ಲೂಕಿನಲ್ಲಿ-1428 ಜನರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.